ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಜಿ.ವಿಮಲ)
ಸರ್ಕಾರದ ಅಧೀನ ಕಾರ್ಯದರ್ಶಿ–2
ಯೋಜನೆ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ
ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ದೇವರ ಹಿಪ್ಪರಗಿಯಲ್ಲಿ ವಿವಿಧ ಯೋಜನೆಗಳಡಿ ಮನೆಗಳ ಮಂಜೂರಾತಿ ಬಗ್ಗೆ

196 (415) ಶ್ರೀ ಪಾಟೀಲ್ ಎ.ಎಸ್ (ನಡಹಳ್ಳಿ) (ದೇವರ ಹಿಪ್ಪರಗಿ) : ಮಾನ್ಯ ವಸತಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008–09 ಮತ್ತು 2009–10ನೇ ಸಾಲಿನಲ್ಲಿ ಇಲ್ಲಿಯವರೆಗೆ ದೇವರ ಹಿಪ್ಪರಗಿ ವಿಧಾನ ಸಭಾ ಕ್ಷೇತ್ರದಲ್ಲಿ ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು?

ಆ) ಈ ಯೋಜನೆಗಳಿಂದ ಮನೆಗಳನ್ನು ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು ಹಾಗೂ ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುವ ಮಾನದಂಡಗಳೇನು (ಯೋಜನಾವಾರು ವಿವರ ನೀಡುವುದು);

ಇ) ಈ ಎಲ್ಲಾ ಯೋಜನೆಗಳಿಂದ ಮನೆಗಳನ್ನು ಪಡೆದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ಹೆಸರು, ವಿಳಾಸ ಹಾಗೂ ಗ್ರಾಮವಾರು ಮತ್ತು ಯಾವ ಗ್ರಾಮ ಪಂಚಾಯತ್‌ಗೆ ನೀಡಲಾಗಿದೆ ಎಂಬುದರ ವಿವರ ನೀಡುವುದು);

ಈ) 2008–09 ಮತ್ತು 2009–10ನೇ ಸಾಲಿನ ಇಲ್ಲಿಯವರೆಗೆ ಮಂಜೂರಾದ ಮನೆಗಳು ಗ್ರಾಮ ಸಭೆ ಕರೆದು ಸರ್ಕಾರ ಅನುಸರಿಸಿದ ಮಾನದಂಡದ ಪ್ರಕಾರ ಹಂಚಿಕೆ ಆಗಿದೆಯಾ ಅಥವಾ ನೇರವಾಗಿ ನಿಗಮಕ್ಕೆ ಬಂದ ಅರ್ಜಿಗಳಿಗೆ ಮಂಜೂರಾತಿ ನೀಡಲಾಗಿದೆಯೇ (ವಿವರ ನೀಡುವುದು)?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ವಸತಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) 2008–09 ಮತ್ತು 2009–10 ನೇ ಸಾಲಿನಲ್ಲಿ ಇಲ್ಲಿಯವರೆಗೆ ದೇವರಹಿಪ್ಪರಗಿ ವಿಧಾನಸಭಾ ಕ್ಷೇತ್ರದಲ್ಲಿ ಸರ್ಕಾರದ ವಿವಿಧ ವಸತಿ ಯೋಜನೆಗಳಡಿ ಒಟ್ಟು 3691 ಮನೆಗಳನ್ನು ಮಂಜೂರು ಮಾಡಲಾಗಿದೆ.

ಈ ಎರಡು ಸಾಲುಗಳ ಪೈಕಿ ಗ್ರಾಮೀಣ ಆಶ್ರಯ ಯೋಜನೆಯಡಿ ಸರ್ಕಾರವು 2009–10ನೇ ಸಾಲಿಗೆ ಮನೆಗಳ ಗುರಿಯನ್ನು ನಿಗದಿಪಡಿಸಿರುವುದಿಲ್ಲ. ಅದೇ ರೀತಿ 2009–10ನೇ ಸಾಲಿಗೆ ಗ್ರಾಮೀಣ ಅಂಬೇಡ್ಕರ್ ಯೋಜನೆಯಡಿ ಸರ್ಕಾರವು ಗುರಿ ನಿಗದಿಪಡಿಸಿದ್ದರೂ ಈ ಕ್ಷೇತ್ರದಡಿ ಬರುವ ತಾಲ್ಲೂಕುಗಳ ಗ್ರಾಮಪಂಚಾಯಿತಿಗಳು ಇನ್ನೂ ಫಲಾನುಭವಿಗಳ ಆಯ್ಕೆಯನ್ನು ಪೂರ್ಣಗೊಳಿಸಿ ಪಟ್ಟಿಗೆ ಅನುಮೋದನೆ ಪಡೆದುಕೊಂಡಿರುವುದಿಲ್ಲ. ಅದಕಾರಣ ಅಂಬೇಡ್ಕರ್ ಯೋಜನೆಯಡಿಯ ಗುರಿಯನ್ನು ಹೊರತುಪಡಿಸಿ ಉಳಿದಂತೆ ಪ್ರತಿ ಯೋಜನೆಯಡಿ ನಿಗಮದಿಂದ ಮಂಜೂರು ಮಾಡಲಾದ ಮನೆಗಳ ವಿವರವನ್ನು ಈ ಕೆಳಗೆ ನೀಡಿದೆ.

ದೇವರ ಹಿಪ್ಪರಗಿ ಕ್ಷೇತ್ರದಲ್ಲಿ ಬರುವ ತಾಲ್ಲೂಕುಗಳು	ಗ್ರಾಮೀಣ ಆಶ್ರಯ 08–09	ಗ್ರಾಮೀಣ ಅಂಬೇಡ್ಕರ್ 08–09	ಇಂದಿರಾ ಆವಾಸ್ 08–09	ಇಂದಿರಾ ಆವಾಸ್ 09–10	ಒಟ್ಟು
ಸಿಂದಗಿ	530	21	274	626	1451
ಮುದ್ದೇಬಿಹಾಳ	140	14	138	154	446
ಬಸವನ ಬಾಗೇವಾಡಿ	385	0	416	993	1794
ಒಟ್ಟು	**1055**	**35**	**828**	**1773**	**3691**

ಆ) ಈ ಕೆಳಕಾಣಿಸಿದ ವಸತಿ ಯೋಜನೆಗಳಡಿಯಲ್ಲಿ ಒಟ್ಟು 3691 ಫಲಾನುಭವಿಗಳಿಗೆ ವಸತಿ ಸೌಕರ್ಯವನ್ನು ಕಲ್ಪಿಸಿಕೊಡಲಾಗಿದ್ದು ಯೋಜನಾವಾರು ವಿವರವನ್ನು ಈ ಕೆಳಗೆ ನೀಡಲಾಗಿದೆ.

ಯೋಜನೆಗಳು	ವಸತಿ ಪಡೆದ ಫಲಾನುಭವಿಗಳು
ಗ್ರಾಮೀಣ ಆಶ್ರಯ	1055
ಗ್ರಾಮೀಣ ಅಂಬೇಡ್ಕರ್	35
ಇಂದಿರಾ ಆವಾಸ್ ಯೋಜನೆ	2601
	3691

ಆಶ್ರಯ ಅಂಬೇಡ್ಕರ್ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುವ ಮಾನದಂಡಗಳು :

ಆಶ್ರಯ ಅಂಬೇಡ್ಕರ್ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಫಲಾನುಭವಿಯು ಈ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕಿರುತ್ತದೆ.

1. ಫಲಾನುಭವಿಯು ಕರ್ನಾಟಕ ರಾಜ್ಯದ ಪ್ರಜೆಯಾಗಿದ್ದು ಯಾವುದೇ ಪಟ್ಟಣ/ನಗರ ಮತ್ತು ಗ್ರಾಮ ಪಂಚಾಯತಿ ಪ್ರದೇಶದಲ್ಲಿ ವಾಸವಾಗಿರಬೇಕು ಮತ್ತು ನಿವೇಶನ ರಹಿತ/ ವಸತಿರಹಿತರ ಪಟ್ಟಿಯಲ್ಲಿ ಸೇರಿಸಬೇಕು.
2. ಫಲಾನುಭವಿಯು ಅರ್ಥಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯವು ಬಡತನ ರೇಖೆಗಿಂತ ಕೆಳಗಿರುವವರಿಗೆ ನಿಗದಿಪಡಿಸಿರುವ ಮಿತಿಗಿಂತ ಕಡಿಮೆ ಇರಬೇಕು (ಪ್ರಸ್ತುತ ಮಿತಿಯು ವಾರ್ಷಿಕ ರೂ. 11800/– ಆಗಿರುತ್ತದೆ.)
3. ನಿವೇಶನಕ್ಕೆ ಸಂಬಂಧಿಸಿದಂತೆ ಹಕ್ಕುಪತ್ರ/ ಖಾತಾ ಪತ್ರ ಹೊಂದಿರಬೇಕು.
4. ಬೇರೆ ಯಾವುದೇ ಯೋಜನೆ/ ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು.

ಇಂದಿರಾ ಆವಾಸ್ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಫಲಾನುಭವಿಯು ಈ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕಿರುತ್ತದೆ.

0.14F-92

1. ಫಲಾನುಭವಿಯು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
2. ಸರ್ವ ಕುಟುಂಬ ಸಮೀಕ್ಷೆಯಡಿಯಲ್ಲಿ 30 ಅಥವಾ ಅದಕ್ಕಿಂತ ಕಡಿಮೆ ಅಂಕ ಹೊಂದಿರಬೇಕು.
3. ಫಲಾನುಭವಿಯು ಆರ್ಥಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯವು ಬಡತನ ರೇಖೆಗಿಂತ ಕೆಳಗಿರುವವರಿಗೆ ನಿಗದಿಪಡಿಸಿರುವ ಮಿತಿಗಿಂತ ಕಡಿಮೆ ಇರಬೇಕು (ಪ್ರಸ್ತುತ ಮಿತಿಯು ವಾರ್ಷಿಕ ರೂ.32000/– ಆಗಿರುತ್ತದೆ.)
4. ನಿವೇಶನಕ್ಕೆ ಸಂಬಂಧಿಸಿದಂತೆ ಹಕ್ಕುಪತ್ರ/ಖಾತಾ ಪತ್ರ ಹೊಂದಿರಬೇಕು.
5. ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು.

ಇ) ಈ ಎಲ್ಲಾ ಯೋಜನೆಗಳಿಂದ ಒಟ್ಟು 3891 ಫಲಾನುಭವಿಗಳು ಮನೆಗಳನ್ನು ಪಡೆದಿದ್ದು ಎಲ್ಲಾ ಫಲಾನುಭವಿಗಳ ಹೆಸರು, ಗಂಡ/ತಂದೆಯ ಹೆಸರು, ಜಾತಿ ವಿವರ, ಗ್ರಾಮ, ಗ್ರಾಮಪಂಚಾಯತಿಯ ವಿವರಗಳನ್ನು ಈ ಕೆಳಗೆ ತಿಳಿಸಿದಂತೆ ಅನುಬಂಧಗಳಲ್ಲಿ ಲಗತ್ತಿಸಲಾಗಿದೆ.

ಕ್ರ ಸಂ.	ತಾಲ್ಲೂಕುಗಳು	ಯೋಜನೆಗಳ ಹೆಸರು	ಶ್ರೇಣಿ	ಒಟ್ಟು ಮನೆಗಳು	ಅನುಬಂಧ
1	ಸಿಂದಗಿ	ಗ್ರಾಮೀಣ ಆಶ್ರಯ	08–09	530	'ಅ'
2		ಗ್ರಾಮೀಣ ಅಂಬೇಡ್ಕರ್	08–09	21	'ಆ'
3		ಇಂದಿರಾ ಆವಾಸ್	08–09	274	'ಇ'
4		ಇಂದಿರಾ ಆವಾಸ್	09–10	626	'ಈ'
5	ಮುದ್ದೇಬಿಹಾಳ	ಗ್ರಾಮೀಣ ಆಶ್ರಯ	08–09	140	'ಉ'

6		ಗ್ರಾಮೀಣ ಅಂಬೇಡ್ಕರ್	08–09	14	'ಊ'
7		ಇಂದಿರಾ ಆವಾಸ್	08–09	138	'ಎ'
8		ಇಂದಿರಾ ಆವಾಸ್	09–10	154	'ಏ'
9	ಬಸವನ ಬಾಗೇವಾಡಿ	ಗ್ರಾಮೀಣ ಆಶ್ರಯ	08–09	385	'ಐ'
10		ಗ್ರಾಮೀಣ ಅಂಬೇಡ್ಕರ್	08–09	0	'ಒ'
11		ಇಂದಿರಾ ಆವಾಸ್	08–09	416	'ಓ'
12		ಇಂದಿರಾ ಆವಾಸ್	09–10	993	'ಔ'
			ಒಟ್ಟು	3691	

ಗ್ರಾಮೀಣ ಅಂಬೇಡ್ಕರ್ ಯೋಜನೆಯಡಿ ಈ ವಿಧಾನಸಭಾ ಕ್ಷೇತ್ರದಡಿ ಬರುವ 3 ತಾಲ್ಲೂಕುಗಳ ಗ್ರಾಮಪಂಚಾಯಿತಿಗಳಿಗೆ 2009–10ನೇ ಸಾಲಿಗೆ ಒಟ್ಟು 137 ಮನೆಗಳನ್ನು ನಿಗದಿಪಡಿಸಿದ್ದು ಫಲಾನುಭವಿಗಳ ಪಟ್ಟಿಗೆ ಮಂಜೂರಾತಿ ಪಡೆದುಕೊಂಡಿರುವುದಿಲ್ಲ. ಗುರಿಗಳ ವಿವರ ಇಂತಿದೆ.

ಕ್ರ. ಸಂ.	ತಾಲ್ಲೂಕುಗಳು	ತಾಲ್ಲೂಕಿಗೆ ನೀಡಿದ ಗುರಿ	ದೇವರ ಹಿಪ್ಪರಗಿ ಕ್ಷೇತ್ರಕ್ಕೆ ಬರುವ ಮನೆಗಳು
1	ಸಿಂದಗಿ	153	53
2	ಮದ್ದೇಬಿಹಾಳ	132	45
3	ಬಸವನ ಬಾಗೇವಾಡಿ	132	39
	ಒಟ್ಟು	417	137

ಈ) 2008–09 ಮತ್ತು 2009–10ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಗ್ರಾಮಪಂಚಾಯಿತಿಗೆ ನೀಡಲಾದ ಗುರಿಗೆ ಎದುರಾಗಿ ಗ್ರಾಮಪಂಚಾಯಿತಿಗಳು ಗ್ರಾಮಸಭೆಗಳ ಮೂಲಕ ಆಯ್ಕೆ ಮಾಡಿ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯ್ತಿತಿಯ ಅನುಮೋದನೆ ಪಡೆದು ನಿಗಮಕ್ಕೆ ಸಲ್ಲಿಸಲಾದ ಪಟ್ಟಿಗೆ ಮಾತ್ರ ಅನುಮೋದನೆ ನೀಡಲಾಗಿರುತ್ತದೆ. ಈ ಪದ್ಧತಿಯನ್ನು ಹೊರತುಪಡಿಸಿ ನೇರವಾಗಿ ನಿಗಮಕ್ಕೆ ಸಲ್ಲಿಸಲಾದ ಯಾವುದೇ ಅರ್ಜಿಗಳಿಗೆ ಮಂಜೂರಾತಿ ನೀಡಲಾಗಿರುವುದಿಲ್ಲ.

ಬೆಳಗಾವಿಯ ಚಿಕ್ಕೋಡಿ ಪುರಸಭೆಗೆ 2009–10ನೇ ಸಾಲಿನ ಸಿ.ಎಂ.ಎಸ್. ಎಂ.ಟಿ.ಪಿ ಯೋಜನೆಯ ಬಗ್ಗೆ

199 (428) ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗಾ) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ, ಚಿಕ್ಕೋಡಿ ಪುರಸಭೆಗೆ 2009–10ನೇ ಸಾಲಿನ ಸಿಎಂಎಸ್‌ಎಂಟಿಡಿಪಿ ಯೋಜನೆಯಡಿಯಲ್ಲಿ ಮಂಜೂರಾದ ಅನುದಾನವೆಷ್ಟು; ಈ ಪುರಸಭೆ ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾದ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆಯೇ;

ಆ) ಕ್ರಿಯಾ ಯೋಜನೆಯನ್ನು ತಯಾರಿಸಲು ಅನುಸರಿಸಬೇಕಾದ ಮಾನದಂಡಗಳೇನು; ಸ್ಥಳೀಯ ಶಾಸಕರ ಸಹಮತಿ ಈ ಯೋಜನೆಗೆ ಅವಶ್ಯವಿಲ್ಲವೆ; ಶಾಸಕರ ಸಹಮತಿ ಇಲ್ಲದೇ ಕ್ರಿಯಾ ಯೋಜನೆ ತಯಾರಿಸಲಾಗಿದೆಯೇ; ಹಾಗೆಯೇ ತಯಾರಿಸಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು)?

ಶ್ರೀ ಎಸ್. ಬಾಲಚಂದ್ರ ಜಾರಕಿ ಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವರು) :

ಅ) ಬೆಳಗಾವಿ ಜಿಲ್ಲೆ ಚಿಕ್ಕೋಡಿ ಪುರಸಭೆಗೆ ಸಿಎಂಎಸ್ ಎಂಟಿಡಿಪಿ ಯೋಜನೆಯಡಿ ರೂ.500.00 ಲಕ್ಷಗಳನ್ನು ನಿಗದಿಪಡಿಸಲಾಗಿದ್ದು, ಇದರಲ್ಲಿ ರೂ.410.00 ಲಕ್ಷಗಳ ಕ್ರಿಯಾ ಯೋಜನೆಗೆ ಮಂಜೂರಾತಿ ನೀಡಲಾಗಿದೆ. ಉಳಿದ ರೂ.90.00 ಲಕ್ಷಗಳಿಗೆ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ಸಲ್ಲಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.'